# Visvesvaraya Technological University

"Jnana Sangama"

Belagavi - 590 018, Karnataka State

Dr. H.N. Jagannatha Reddy B.E., M.E.,Ph.D.
REGISTRAR

Phone : (0831) 2498100
Fax : (0831) 2405467


Ref: VTU/BGM/Aca-OS/Govt./2018-19/ 854 Date : 27 APR 2018

## : ಸುತ್ತೋಲೆ :

ವಿಷಯ: ವೃತ್ತಿಪರ ಶಿಕ್ಷಣ ಸಂಸ್ಥೆಗಳು ತಾಂತ್ರಿಕ ಶಿಕ್ಷಣ ಕೋರ್ಸುಗಳನ್ನು ಬೋಧಿಸಲು ಕಡ್ಡಾಯವಾಗಿ ಎಐಸಿಟಿಇ , ನವದೆಹಲಿರವರ ಅನುಮೋದನೆಯನ್ನು ಪಡೆಯುವ ಕುರಿತು

ಉಲ್ಲೇಖ: ಸರ್ಕಾರದ ಸುತ್ತೋಲೆ ಇಡಿ 132 ಟಿಇಸಿ 2017 ದಿ: 13-3-2018

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ, ವೃತ್ತಿಪರ ಶಿಕ್ಷಣ ಸಂಸ್ಥೆಗಳು ತಾಂತ್ರಿಕ ಶಿಕ್ಷಣ ಕೋರ್ಸುಗಳನ್ನು ಬೋಧಿಸಲು ಕಡ್ಡಾಯವಾಗಿ ಎಐಸಿಟಿಇ , ನವದೆಹಲಿರವರ ಅನುಮೋದನೆಯನ್ನು ಪಡೆಯುವ ಕುರಿತಾದ ಸರ್ಕಾರ ಸುತ್ತೋಲೆ ಇಡಿ 132 ಟಿಇಸಿ 2017 ದಿ: 13-3-2018ಯನ್ನು ಈ ಸುತ್ತೋಲೆಯೊಂದಿಗೆ ತಮ್ಮ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಲಗತ್ತಿಸಿ ಕಳುಹಿಸಲಾಗಿದೆ

ಆದೇಶ ಮೇರೆಗೆ
ಸಹಿ ಇದೆ/-
ಕುಲಸಚಿವರು

ಆಡಕ: ಮೇಲಿನಂತೆ

**ಇವರಿಗೆ,**

ವಿತಾವಿಯ ಅಡಿಯಲ್ಲಿ ಬರುವ ಎಲ್ಲ ಮಹಾವಿದ್ಯಾಲಯಗಳ ಪ್ರಾಂಶುಪಾಲರಿಗೆ

**ಪ್ರತಿ ಮಾಹಿತಿಗಾಗಿ**

1. ಮಾನ್ಯ ಕುಲಪತಿಗಳಿಗೆ , ಅವರ ಕಾರ್ಯದರ್ಶಿಗಳ ಮುಖಾಂತರ
2. ವಿತಾವಿ ಎಲ್ಲ ಪ್ರಾದೇಶಿಕ ಕಚೇರಿಗಳ ಮುಖ್ಯಸ್ಥರಿಗೆ
3. ವಿಶೇಷಾಧಿಕಾರಿಗಳು, ವಿತಾವಿ ಸಿಎನ್‌ಸಿ ವಿಭಾಗ, ಬೆಳಗಾವಿ( ಸುತ್ತೋಲೆಯನ್ನು ವಿತಾವಿ ಅಂತರಜಾಲದಲ್ಲಿ ಪ್ರಕಟಿಸಲು)

Reddy 26.04.18
ಕುಲಸಚಿವರು

ಕರ್ನಾಟಕ ಸರ್ಕಾರ

ಸಂಖ್ಯೆ: ಇಡಿ 132 ಟಿಇಸಿ 2017

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ:13-03-2018

Inward No. 16073
Date: 24/3/18

ಸುತ್ತೋಲೆ

ವಿಷಯ:- ವೃತ್ತಿಪರ ಶಿಕ್ಷಣ ಸಂಸ್ಥೆಗಳು ತಾಂತ್ರಿಕ ಶಿಕ್ಷಣ ಕೋರ್ಸುಗಳನ್ನು ಬೋಧಿಸಲು ಕಡ್ಡಾಯವಾಗಿ ಎಐಸಿಟಿಇ, ನವದೆಹಲಿ ರವರ ಅನುಮೋದನೆಯನ್ನು ಪಡೆಯುವ ಕುರಿತು.

ರಾಜ್ಯದ ವೃತ್ತಿಪರ ಶಿಕ್ಷಣ ಸಂಸ್ಥೆಗಳು ತಾಂತ್ರಿಕ ಕೋರ್ಸುಗಳಿಗೆ ಸಂಬಂಧಿಸಿದ ಪದವಿ ಮತ್ತು ಸ್ನಾತಕೋತ್ತರ ಪದವಿ ಕೋರ್ಸುಗಳನ್ನು ನಡೆಸಲು ನಿಯಮಾನುಸಾರ ಪ್ರತಿ ಸಾಲಿನಲ್ಲೂ ಎಐಸಿಟಿಇ, ನವದೆಹಲಿ ರವರಿಂದ ಪೂರ್ವಾನುಮೋದನೆಯನ್ನು ಪಡೆಯುವುದು ಕಡ್ಡಾಯವಾಗಿರುತ್ತದೆ.

2) ಮಾನ್ಯ ಸರ್ವೋಚ್ಛ ನ್ಯಾಯಾಲಯದ ಪ್ರಕರಣ ಸಂಖ್ಯೆ: SLP (Civil) No. 7277/2014 ಒರಿಸ್ಸಾ ಟೆಕ್ನಿಕಲ್ ಕಾಲೇಜಸ್ ಅಸೋಸಿಯೇಷನ್ ವಿರುದ್ಧ ಎಐಸಿಟಿಇ ಮತ್ತು ಇತರರ ಪ್ರಕರಣದಲ್ಲಿ ದಿನಾಂಕ:09.05.2014 ರಂದು ನೀಡಿರುವ ಆದೇಶದ ಹಿನ್ನೆಲೆಯಲ್ಲಿ ಅಧ್ಯಕ್ಷರು, ಎಐಸಿಟಿಇ, ನವದೆಹಲಿ ರವರ ಪತ್ರ ಸಂಖ್ಯೆ: No. F.1-29/CM/AICTE/2012, Dated: May 12, 2014 ರ ಪತ್ರದಲ್ಲಿ ಎಲ್ಲಾ ವಿಶ್ವವಿದ್ಯಾಲಯಗಳ ಕುಲಪತಿಗಳಿಗೆ ತಿಳಿಸಿರುವಂತೆ ಯಾವುದೇ ತಾಂತ್ರಿಕ ಸಂಸ್ಥೆಗಳು/ತಾಂತ್ರಿಕ ಕಾಲೇಜುಗಳು ಎಂ.ಬಿ.ಎ/ಮ್ಯಾನೇಜ್‌ಮೆಂಟ್ ಕೋರ್ಸುಗಳು ಸೇರಿದಂತೆ ತಾಂತ್ರಿಕ ಶಿಕ್ಷಣದ ಕೋರ್ಸುಗಳನ್ನು ನಡೆಸಲು ಎಐಸಿಟಿಇ, ನವದೆಹಲಿ ಈ ಸಂಸ್ಥೆಯಿಂದ ಪೂರ್ವಾನುಮತಿಯನ್ನು ಪಡೆಯುವುದು ಕಡ್ಡಾಯವಾಗಿರುತ್ತದೆ.

3) ಇದರ ಪರಿಣಾಮವಾಗಿ, ತಾಂತ್ರಿಕ ಶಿಕ್ಷಣ ಕೋರ್ಸುಗಳ ಪ್ರವೇಶಾತಿಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ವತಿಯಿಂದ ಪ್ರಚುರಪಡಿಸಲಾಗುವ ಸೀಟ್ ಮ್ಯಾಟ್ರಿಕ್ಸ್‌ನಲ್ಲಿ ತಮ್ಮ ಸಂಸ್ಥೆಯ ಸೀಟುಗಳನ್ನು ಸೇರ್ಪಡೆಗೊಳಿಸುವ / ಅಳವಡಿಸುವ ಬಗ್ಗೆ ಸರ್ಕಾರಿ ವಿಶ್ವವಿದ್ಯಾಲಯಗಳು / ಖಾಸಗೀ ವಿಶ್ವವಿದ್ಯಾಲಯಗಳು / ಡೀಮ್ಡ್ ವಿಶ್ವವಿದ್ಯಾಲಯಗಳು ಹಾಗೂ ಯಾವುದೇ ಸ್ವರೂಪದ ಶಿಕ್ಷಣ ಸಂಸ್ಥೆಯಾದರೂ ಸಹ ತಾವು ನಡೆಸುವ ತಾಂತ್ರಿಕ ಕೋರ್ಸುಗಳಿಗೆ ಎಐಸಿಟಿಇ, ನವದೆಹಲಿ ಇವರಿಂದ ಪಡೆದಿರುವ ಚಾಲ್ತಿ ಸಾಲಿನ ಅನುಮೋದಿತ ಇನ್‌ಟೇಕ್ ಆದೇಶದ ಪ್ರತಿಯನ್ನು ಸರ್ಕಾರಕ್ಕೆ ಸಲ್ಲಿಸುವ ಮನವಿಯ ಜೊತೆ ಲಗತ್ತಿಸಿರಬೇಕೆಂದು ಮತ್ತು ಇದನ್ನು ಲಗತ್ತಿಸಿಲ್ಲದ ಮನವಿಗಳನ್ನು ಪರಿಗಣಿಸಲಾಗುವುದಿಲ್ಲವೆಂದು ಸುತ್ತೋಲೆ ಸಂಖ್ಯೆ: ಇಡಿ 121 ಟಿಇಸಿ 2016 (ಭಾ), ದಿನಾಂಕ: 25-08-2016 ರಲ್ಲಿ ಈಗಾಗಲೆ ಸ್ಪಷ್ಟಪಡಿಸಲಾಗಿದೆ.

4) ದಿನಾಂಕ:25.08.2016 ರ ಸುತ್ತೋಲೆಯಲ್ಲಿನ ಮಾರ್ಗಸೂಚಿಗಳನ್ನು ವಿಶ್ವವಿದ್ಯಾಲಯಗಳು ಅನುಸರಿಸದೆ, ಇನ್‌ಟೇಕ್ ಪ್ರಮಾಣವನ್ನು ಹೆಚ್ಚಿಸಲು ತಮ್ಮ ವಿಶ್ವವಿದ್ಯಾಲಯದ ಅಧಿನಿಯಮದಲ್ಲಿ ಅವಕಾಶ ಇರುವುದಾಗಿ ತಿಳಿಸುತ್ತಾ, ತಾಂತ್ರಿಕ ಕೋರ್ಸುಗಳಿಗೆ ಸ್ವಯಂವಾಗಿ ಇನ್‌ಟೇಕ್ ಪ್ರಮಾಣವನ್ನು ಗುರುತಿಸಿಕೊಂಡು, ಸದರಿ ಅಧಿನಿಯಮದನ್ವಯ ಸರ್ಕಾರಕ್ಕೆ ಇಂತಿಷ್ಟು ಪ್ರಮಾಣದ ಸೀಟುಗಳನ್ನು ಒಪ್ಪಿಸಿ, ಈ ಸೀಟುಗಳನ್ನು ಸೀಟ್ ಮ್ಯಾಟ್ರಿಕ್ಸ್ ನಲ್ಲಿ ಸೇರ್ಪಡೆಗೊಳಿಸುವಂತೆ ಮನವಿಗಳನ್ನು ಸಲ್ಲಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಪುತಿನೋ.

5) ತಾಂತ್ರಿಕ ಕೋರ್ಸುಗಳನ್ನು ನಡೆಸಲು ಸಕ್ಷಮ ಪ್ರಾಧಿಕಾರವಾದ ಎಐಸಿಟಿಇ, ನವದೆಹಲಿ ಇವರಿಂದ ಪೂರ್ವಾನುಮೋದನೆಯನ್ನು ಪಡೆಯುವುದು ಕಡ್ಡಾಯವಾಗಿರುತ್ತದೆಯೆಂದು ಎಐಸಿಟಿಇ ಯು ಹೊರಡಿಸಿರುವ ಸಾರ್ವಜನಿಕ ಪ್ರಕಟಣೆಯ ಸಂಖ್ಯೆ:ಯುಬಿ/04(03)/2011 ರಲ್ಲಿ ಸ್ಪಷ್ಟೀಕರಿಸಲಾಗಿದೆ. ಅಲ್ಲದೆ **"ತಾಂತ್ರಿಕ ಶಿಕ್ಷಣ"** ಎಂಬುದಕ್ಕೆ ಎಐಸಿಟಿಇ ಅಧಿನಿಯಮ 1987 ರಲ್ಲಿನ ಪ್ರಕರಣ ಸಂಖ್ಯೆ:2(ಜಿ) ಮತ್ತು (ಹೆಚ್) ರಲ್ಲಿ ವ್ಯಾಖ್ಯಾನವನ್ನು ನೀಡಿದ್ದು, ಅದರಂತೆ **'ತಾಂತ್ರಿಕ ಶಿಕ್ಷಣ'**ವನ್ನು ನಡೆಸಲು ಅದೇ ಅಧಿನಿಯಮದ ಪ್ರಕರಣ ಸಂಖ್ಯೆ:10(ಕೆ) ರನ್ವಯ ಎಐಸಿಟಿಇ, ನವದೆಹಲಿ ರವರ ಪೂರ್ವಾನುಮೋದನೆ ಕಡ್ಡಾಯವಾಗಿರುತ್ತದೆ. ಇದನ್ನು ಭಾರತಿ ದಾಸನ್ ವಿಶ್ವವಿದ್ಯಾಲಯ ಮತ್ತು ಇತರರು ವಿರುದ್ಧ ಎಐಸಿಟಿಇ ಮತ್ತು ಇತರರ ಪ್ರಕರಣದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯದ ತೀರ್ಪು ಪುಷ್ಟೀಕರಿಸುತ್ತದೆ.

೬) ಈ ಎಲ್ಲಾ ಹಿನ್ನೆಲೆಯಲ್ಲಿ, ಯಾವುದೇ ತಾಂತ್ರಿಕ ಪದವಿ ಮತ್ತು ಸ್ನಾತಕೋತ್ತರ ಪದವಿ ಕೋರ್ಸುಗಳನ್ನು ನಡೆಸಲು ಕಡ್ಡಾಯವಾಗಿ ಎಐಸಿಟಿಇ, ನವದೆಹಲಿ ರವರಿಂದ ಪೂರ್ವಾನುಮೊದನೆಯನ್ನು ಎಲ್ಲಾ ಸರ್ಕಾರಿ ವಿಶ್ವವಿದ್ಯಾಲಯಗಳು/ಖಾಸಗಿ ವಿಶ್ವವಿದ್ಯಾಲಯಗಳು/ಡೀಮ್ಡ್ ವಿಶ್ವವಿದ್ಯಾಲಯಗಳು ಮತ್ತು ಇತರ ಯಾವುದೇ ಸ್ವರೂಪದ ವೃತ್ತಿಪರ ಶಿಕ್ಷಣ ಸಂಸ್ಥೆಗಳು ಪಡೆದಿರಲೇಬೇಕು. ಯಾವ ಶಿಕ್ಷಣ ಸಂಸ್ಥೆಯು / ವಿಶ್ವವಿದ್ಯಾನಿಲಯವು ಇದನ್ನು ಪಡೆದಿರುವುದೊ ಅಂತಹ ಶಿಕ್ಷಣ ಸಂಸ್ಥೆಗಳ ಸೀಟುಗಳನ್ನು ಮಾತ್ರ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ವತಿಯಿಂದ ಪ್ರಚುರಪಡಿಸಲಾಗುವ ಸೀಟ್ ಮ್ಯಾಟ್ರಿಕ್ಸ್ ನಲ್ಲಿ ಅಳವಡಿಸಲು / ಸೇರ್ಪಡೆಗೊಳಸಲು ಪರಿಗಣಿಸಲಾಗುವುದೆಂದು ಎಲ್ಲ ವೃತ್ತಿಪರ ಶಿಕ್ಷಣ ಸಂಸ್ಥೆಗಳಗೆ ಮತ್ತೊಮ್ಮೆ ಸ್ಪಷ್ಟೀಕರಿಸಲಾಗಿದೆ.

S Venkatesh

(ಎಸ್.ವೆಂಕಟೇಶ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ (ತಾಂತ್ರಿಕ ಶಿಕ್ಷಣ)

13/3/18

ಇವರಿಗೆ,

1) ಕುಲಸಚಿವರು, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಜ್ಞಾನಸಂಗಮ, ಬೆಳಗಾಂ
2) ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ಪರೀಕ್ಷಾ ಪ್ರಾಧಿಕಾರ, ಬೆಂಗಳೂರು (ಈ ಸುತ್ತೋಲೆಯನ್ನು ಎಲ್ಲಾ ಶಿಕ್ಷಣ ಸಂಸ್ಥೆಗಳು ತಮ್ಮ ಅಂತರ್ಜಾಲದಲ್ಲಿ ಪ್ರಚುರ ಪಡಿಸುವ ಸಲುವಾಗಿ ಪ್ರಾಧಿಕಾರದ ಅಂತರ್ಜಾಲದಲ್ಲಿ ಪ್ರಚುರಪಡಿಸುವುದು)
3) ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು
4) ಉಪ ಕುಲಪತಿಗಳು, ರಾಜ್ಯದ ಎಲ್ಲಾ ಸರ್ಕಾರಿ/ಖಾಸಗಿ/ಡೀಮ್ಡ್ ವಿಶ್ವವಿದ್ಯಾಲಯಗಳು
5) ಪ್ರಾಂಶುಪಾಲರು, ರಾಜ್ಯದಲ್ಲಿನ ಎಲ್ಲಾ ಖಾಸಗಿ ತಾಂತ್ರಿಕ ಶಿಕ್ಷಣ ಸಂಸ್ಥೆಗಳು
6) Director, AICTE-South Western Regional Office, P.K. Block, Palace Road, Bengaluru – 560 009
7) ಉನ್ನತ ಶಿಕ್ಷಣ ಮಂತ್ರಿಯವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು
8) ಶಾಖಾ ರಕ್ಷಾ ಕಡತ/ಓ.ಡಿ.ಜಿ.ಸಿ.